# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೩೫

### ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರ ಕಾರ್ಯ – ೩

**ಸ್ವಾ**ಮಿ ವಿವೇಕಾನಂದರ ಬಗ್ಗೆ ಈವರೆಗೆ ಬಂದ ಜೀವನ ಚರಿತ್ರೆಗಳನ್ನು ಇತಿಹಾಸದ ಬೆಳಕಿನಲ್ಲಿ ಅಧ್ಯಯನ ಮಾಡಿದಾಗ, ಅವುಗಳ ಲೇಖಕರು ಮಾಡಿರುವ ಒಂದು ತಪ್ಪು ನಮಗೆ ಗೋಚರ ವಾಗುತ್ತದೆ. ಸ್ವಾಮೀಜಿಯವರ ಸ್ವಂತ ಹೇಳಿಕೆಗಳು ಮತ್ತು ಚಟು ವಟಿಕೆಗಳ ಆಧಾರದ ಮೇಲೆ ಅವರು ತಮ್ಮದೇ ಆದ ಒಂದು ವಿಚಿತ್ರವಾದ ತೀರ್ಮಾನಕ್ಕೆ ಬಂದಿದ್ದಾರೆ. ಅದೇನೆಂದರೆ, ಸ್ವಾಮಿ ವಿವೇಕಾನಂದರಂಥ ಉನ್ನತ ಮಟ್ಟದ ದಾರ್ಶನಿಕ ಪುರುಷ ರೊಬ್ಬರು ತಮ್ಮ ವ್ಯಕ್ತಿತ್ವದ ಮೇರು ಶಕ್ತಿಬಲಗಳನ್ನು ಭಾರತಕ್ಕಾಗಿ ಹಣವನ್ನು ಸಂಗ್ರಹಿಸಲು ಮತ್ತು ಹಿಂದೂ ರೀತಿರಿವಾಜುಗಳನ್ನು ಅಮೆರಿಕೆಯ ಜನಕ್ಕೆ ವಿವರಿಸಲು ವಿನಿಯೋಗಿಸಿದರು ಎನ್ನು ವುದೇ ಆ ನಿಷ್ಕರ್ಷೆ. ಇದು ಸ್ವಾಮೀಜಿಯವರು ಅಮೆರಿಕೆಯಲ್ಲಿ ಕಳೆದ ಪರಿವ್ರಾಜಕ ದಿನಗಳ ಸಂಪೂರ್ಣ ವಿರುದ್ಧವಾದ ವಿವರಣೆ ಯಾಗಿದೆ. ಇದನ್ನು ನಾವು ಹೇಗೆ ತಾನೇ ಒಪ್ಪಿಕೊಳ್ಳಲು ಸಾಧ್ಯ?

ನಾವು ಸಂತರ ಮತ್ತು ಋಷಿಗಳ ಜೀವನವನ್ನು ಅಭ್ಯಾಸ ಮಾಡಿದಾಗ, ಒಂದು ವಿಷಯ ನಮಗೆ ಸ್ಪಷ್ಟವಾಗುತ್ತದೆ. ಒಬ್ಬ ದಾರ್ಶನಿಕ ಪುರುಷನ ಕಾರ್ಯಚಟುವಟಿಕೆಗಳನ್ನು ಎರಡು ಹಂತ ಗಳಲ್ಲಿ ಅರ್ಥಮಾಡಿಕೊಳ್ಳಬೇಕು. ಒಂದು ಆತನ ಜೀವನದಲ್ಲಿ ಮೇಲುಮೇಲಕ್ಕೆ ಕಾಣುವ ಧ್ಯೇಯೋದ್ದೇಶಗಳು. ಇವುಗಳನ್ನು ನಾವು ಸರಿಸುಮಾರು ಅರ್ಥಮಾಡಿಕೊಳ್ಳಬಹುದು. ಅಂಥ ಚಟು ವಟಿಕೆಯು ಅತ್ಯಂತ ಅಗಾಧವಾಗಿರಬಹುದು ಮತ್ತು ಸ್ಫೂರ್ತಿ ದಾಯಕ ವಾಗಿರಬಹುದು. ಆದರೆ ಆ ಎಲ್ಲ ಬಾಹ್ಯ ಕ್ರಿಯೆಗಳು ಆತನ ಮನಸ್ಸಿನ ಅತ್ಯಲ್ಪ ಭಾಗವನ್ನು ಮಾತ್ರವೇ ಆಕ್ರಮಿಸಿ ಕೊಂಡಿರುತ್ತವೆ. ಅದಕ್ಕಿಂತ ದೊಡ್ಡದಾದ ಮತ್ತು ವಿಶಾಲವಾದ ಸುಪ್ತವಾದ ಭಾಗವು ನಮ್ಮ ದೃಷ್ಟಿಯ ಪರಿಧಿಗೆ ಮರೆಯಾಗಿ, ಅಂತರಂಗದಲ್ಲಿ ಕ್ರಿಯಾಶೀಲವಾಗಿರುತ್ತದೆ. ಇನ್ನೂ ಹೇಳಬೇಕೆಂ ದರೆ, ಆ ಮಹಾನ್ ವ್ಯಕ್ತಿಯ ವೈಶಿಷ್ಟ್ಯವೇನೆಂದರೆ ಆತನ ಮನ ಸ್ಸಿನ ಅಂತರಾಳವು ಚೈತನ್ಯಮಯವಾಗಿರುತ್ತದೆ ಮತ್ತು ಭಗವ ದ್ಭಾವದಲ್ಲಿ ತಲ್ಲೀನವಾಗಿರುತ್ತದೆ. ಖಂಡಿತವಾಗಿಯೂ ಸ್ವಾಮೀಜಿ ಯವರ ಮನಸ್ಸಿನ ಗಭೀರ ಮತ್ತು ನೀರವ ಅಂಶವು – ಬಾಹ್ಯ ದಲ್ಲಿ ಅವರು 'ಸುಂಟರಗಾಳಿ ಸಂನ್ಯಾಸಿ' ಎಂದು ಅನ್ನಿಸಿಕೊಂಡರೂ – ತನ್ನದೇ ಆದ ಪ್ರಭಾವವನ್ನು ಬೀರುತ್ತಿತ್ತು ಎಂಬುದಂತೂ ಸತ್ಯ. ಈ ಆಂತರಂಗದ ಅಂಶದಲ್ಲಿಯೇ ಅವರ ಜೀವಿತ ಕಾರ್ಯದ ನೈಜವಾದ ಮತ್ತು ವಿಶೇಷವಾದ ಮಹತ್ವ ಅಡಗಿರುವುದು.

ಆದರೆ, ಹೇಗೋ ಏನೋ, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳಲ್ಲಿ ಮೇಲಿನ ಅಂಶಕ್ಕೆ ಅಷ್ಟೊಂದು ಪ್ರಾಮುಖ್ಯತೆ ಯನ್ನು ನೀಡಿರುವುದು ಕಂಡುಬಂದಿರುವುದಿಲ್ಲ. ಹಾಗೆಯೇ ಈ ಜೀವನಚರಿತ್ರೆಗಳಲ್ಲಿ ಅಮೆರಿಕಾದಲ್ಲಿನ ಸ್ವಾಮೀಜಿಯವರ ಜೀವ ನವು ಕ್ರಿಯಾತ್ಮಕವಾಗಿತ್ತು ಎಂದಷ್ಟೇ ಬಿಂಬಿಸಲಾಗಿದೆ; ಅವರೊಬ್ಬ ಕ್ರಿಯಾಶೀಲ ವ್ಯಕ್ತಿಯಾಗಿದ್ದರು ಎಂದು ವರ್ಣಿಸಲಾಗಿದೆ. ಅವ ರೊಬ್ಬ ಪ್ರಭಾವಶಾಲಿ ಉಪನ್ಯಾಸಕರು ಮತ್ತು ಬುದ್ಧಿಮತ್ತೆಯುಳ್ಳವ ರೆಂದೇ ಅವರ ಬಗ್ಗೆ ವಿವರಿಸಲಾಗಿದೆ. ನಾವು ನಿಜವಾಗಿಯೂ ಸ್ವಾಮೀಜಿಯವರ ಬಗ್ಗೆ ಏನನ್ನು ತಿಳಿದುಕೊಳ್ಳಬೇಕಾಗಿತ್ತೋ ಹಾಗೆ ಆ ಗ್ರಂಥಗಳಲ್ಲಿ ಅವರ ಬಗ್ಗೆ ಮಾಹಿತಿ ನಮಗೆ ಲಭ್ಯ ವಾಗುವುದಿಲ್ಲ. ಸ್ವಾಮಿ ವಿವೇಕಾನಂದರು ಯಾವತ್ತೂ ಅತೀಂ ದ್ರಿಯ ಚೈತನ್ಯದಲ್ಲಿ ಮಗ್ನರಾಗಿರುತ್ತಿದ್ದರು; ಉನ್ನತ ಮಟ್ಟದ ನೂರಾರು ಆಧ್ಯಾತ್ಮಿಕ ಅನುಭವಗಳಿಂದ ಸುಸಂಪನ್ನರಾಗಿದ್ದರು. ಅವರು ಹಲವಾರು ಕಾರ್ಯಗಳಲ್ಲಿ ವ್ಯಸ್ತವಾಗಿದ್ದರೂ ಕೂಡ ಅವರ ಈ ಆಧ್ಯಾತ್ಮಿಕ ಔನ್ನತ್ಯ ಯಾವತ್ತೂ ಚಿರಸ್ಥಾಯಿಯಾಗಿ ಇದ್ದೇ ಇರುತ್ತಿತ್ತು. ಅಂತರಂಗದ ಗರ್ಭದಲ್ಲಿ ಹುದುಗಿಕೊಂಡಿದ್ದ ಆಧ್ಯಾತ್ಮಿಕತೆಯನ್ನು ನೀರವವಾಗಿ ಅಮೆರಿಕಾದ ಜನಸಮು ದಾಯಕ್ಕೆ ವಿತರಿಸಿದ್ದೇ ಸ್ವಾಮಿ ವಿವೇಕಾನಂದರು ಆ ದೇಶಕ್ಕೆ ನೀಡಿದ ಅಪೂರ್ವ ಸೇವೆಯಾಗಿದೆ.

ಹಾಗೆಂದು ಸ್ವಾಮೀಜಿಯವರ ಹೊರಗಿನ ಕಾರ್ಯಚಟು ವಟಿಕೆಗಳ ಮಹತ್ವವನ್ನೇನೂ ನಾವು ಕಡಮೆ ಮಾಡುತ್ತಿಲ್ಲ. ಆದರೆ ಸ್ವಾಮೀಜಿಯವರ ಬಗೆಗಿನ ಜೀವನಚರಿತ್ರೆಗಳು ಈ ಅಂಶಕ್ಕೆ ಬಹಳಷ್ಟು ಪ್ರಾಧಾನ್ಯತೆಯನ್ನು ಕೊಟ್ಟು, ಅವರ ಅಂತರಾಳದಲ್ಲಿ ಪ್ರಜ್ವಲಿಸುತ್ತಿದ್ದ ಆಧ್ಯಾತ್ಮಿಕ ಪ್ರಭೆಯ ಬಗ್ಗೆ ಅಷ್ಟೊಂದು ಗಮನ ಹರಿಸಿಲ್ಲವೆಂದು ಮಾತ್ರವೇ ನಾವು ಎತ್ತಿತೋರಿಸುತ್ತಿದ್ದೇವೆ. ಇದ ಲ್ಲದೆ, ಸ್ವಾಮೀಜಿಯವರ ದೇಶಭಕ್ತಿಯನ್ನು ಮಾತ್ರವೇ ಈ ಜೀವನ ಚರಿತ್ರೆಗಳು ದೊಡ್ಡದಾಗಿ ಬಿಂಬಿಸುತ್ತವೆ. ಅವರ ಪಾಶ್ಚಾತ್ಯ ಕಾರ್ಯವು ಭಾರತದ ಹಿರಿಮೆಗರಿಮೆಗಳನ್ನು ಇಡೀ ವಿಶ್ವವು ಗುರುತಿಸುವಂತೆ ಮಾಡಿದೆ ಎಂಬ ಅಂಶವನ್ನೇ ಈ ಎಲ್ಲ ಗ್ರಂಥ ಗಳು ವೈಭವೀಕರಿಸುತ್ತವೆ. ಆದರೆ ಅಮೆರಿಕಾದ ಅವರ ಕಾರ್ಯ ದಲ್ಲಿ ಈ ಅಂಶವು ಅಷ್ಟೊಂದು ಮಹತ್ವದಲ್ಲವೆಂದು ಈ ಗ್ರಂಥ ಕಾರರು ಅರಿತಿಲ್ಲ. ಹೀಗಾಗಿ ಸ್ವಾಮೀಜಿಯವರ ವ್ಯಕ್ತಿತ್ವದ ಆಳ– ಅಗಲಗಳಲ್ಲಿ ಓತಪ್ರೋತವಾಗಿರುವ ಅನಂತ ಆಧ್ಯಾತ್ಮಿಕ ಆಯಾಮ

ವನ್ನು ಗುರುತಿಸುವುದರಲ್ಲಿ ಅವರೆಲ್ಲ ವಿಫಲರಾಗಿದ್ದಾರೆ ಅನ್ನಿಸುತ್ತದೆ.

ಆದರೆ ಶ್ರೀರಾಮಕೃಷ್ಣರ ಇನ್ನಿತರ ನೇರ ಶಿಷ್ಯರ ಜೀವನ ವೃತ್ತಾಂತಗಳಲ್ಲಿ ಅವರೆಲ್ಲರ ಆಧ್ಯಾತ್ಮಿಕ ಸಾಧನೆಯನ್ನೇ ಹೆಚ್ಚಾಗಿ ಬಿಂಬಿಸಲಾಗಿದೆ. ಈ ಬಗೆಯ ಆಧ್ಯಾತ್ಮಿಕ ಅಂಶದ ವಿಸ್ತೃತ ವಿವರಣೆಯು ಸ್ವಾಮಿ ವಿವೇಕಾನಂದರ ಜೀವನಚರಿತ್ರೆಗಳಲ್ಲಿ ಕಂಡುಬರುವುದಿಲ್ಲವೆಂಬುದು ದೌರ್ಭಾಗ್ಯವೇ ಸರಿ. ಹಾಗೆ ನೋಡಿದರೆ, ಎಲ್ಲ ಇನ್ನಿತರ ಸಾಕ್ಷಾತ್ ಶಿಷ್ಯರಿಗಿಂತಲೂ ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕವಾಗಿ ಅತ್ಯಂತ ಶ್ರೇಷ್ಠರೆಂದು ಶ್ರೀರಾಮಕೃಷ್ಣರೇ ಹೇಳಿರುವುದು ಕಂಡುಬರುತ್ತದೆ. ಸ್ವಾಮೀಜಿಯವರ ಬಾಹ್ಯ ಸಾಧನೆಗಳಲ್ಲಿ ಕಂಡುಬರುವ ಅವರ ಉಜ್ವಲ ಪ್ರಖರ ವ್ಯಕ್ತಿತ್ವದ ಮೂಲಸೆಲೆ ಅದಾವುದು ಎಂದು ಜೀವನಚರಿತ್ರೆಕಾರರು ಅಚ್ಚರಿಗೊಳ್ಳುತ್ತಾರೆ. ಅದು ಅವರ ಆಧ್ಯಾತ್ಮಿಕ ಮಹಾನತೆಯೇ ಎಂಬುದು ಸುಸ್ಪಷ್ಟವಾಗಿದೆ. ಆದರೆ ಈ ಅಂಶವನ್ನು ಜೀವನಚರಿತ್ರೆಗಳಲ್ಲಿ ಕಡೆಗಣಿಸಿರುವುದು ಅನೇಕ ಅಪಾರ್ಥಗಳಿಗೆ ಎಡೆಮಾಡಿಕೊಟ್ಟಿರುವದಂತೂ ನಿಜ.

ಉದಾಹರಣೆಗಾಗಿ, ಕೆಲವು ಆಧುನಿಕ ವಿದ್ವಾಂಸರು ಒಂದು ತಪ್ಪು ನಿಷ್ಕರ್ಷೆಗೆ ಬಂದಿದ್ದಾರೆ. ಅದೇನೆಂದರೆ, ಸ್ವಾಮೀಜಿಯವರು ಶ್ರೀರಾಮಕೃಷ್ಣರ ಜೀವಿತಕಾರ್ಯದ ಬಾಹ್ಯಮುಖವನ್ನು ಮಾತ್ರವೇ ಕೈಗೊಂಡಿದ್ದಾರೆ ಎನ್ನುವುದು. ಗುರುದೇವರ ಆಧ್ಯಾತ್ಮಿಕ ಶಕ್ತಿಯು ಇನ್ನೆಲ್ಲೋ ಅಡಗಿದೆ ಎನ್ನುತ್ತಾರೆ ಅವರು. ಇದಲ್ಲದೆ, ಸ್ವಾಮೀಜಿ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ದರ್ಶನವನ್ನು ಮಾಡದಿದ್ದರೆ, ಅವರೊಬ್ಬ ಮಹಾನ್ ರಾಜಕೀಯ ನೇತಾರರಾಗಿರುತ್ತಿದ್ದರು ಎಂಬ ಅಭಿಪ್ರಾಯವೂ ಇದೆ. ಇವೆಲ್ಲ ಸತ್ಯಕ್ಕೆ ದೂರವಾದ ವಿವರಣೆಗಳು. ಇದಕ್ಕೆ ಕಾರಣ, ಸ್ವಾಮಿ ವಿವೇಕಾನಂದರು ನಿತ್ಯಸಿದ್ಧರು ಅಂದರೆ ಜನ್ಮತಃ ಆಧ್ಯಾತ್ಮಿಕ ಸುಸಂಪನ್ನರು ಎಂದು ಶ್ರೀರಾಮಕೃಷ್ಣರೇ ಹೇಳಿದ್ದಾರೆ. ಹೌದು, ಸ್ವಾಮೀಜಿ ಇಡೀ ಜಗತ್ತನ್ನೇ ಅಲ್ಲಾಡಿಸುವಂಥ ಶಕ್ತಿಸಂಪನ್ನರಾಗಿದ್ದರು. ಆದರೆ, ಅವರು ದಕ್ಷಿಣೇಶ್ವರಕ್ಕೆ ಬಂದದ್ದು ಮತ್ತು ಗುರುದೇವರ ಆಶೀರ್ವಾದವನ್ನು ಪಡೆದದ್ದು ಕೇವಲ ಕಾಕತಾಳೀಯವೇನೂ ಅಲ್ಲ.

ಇನ್ನೂ ಕೆಲವು ವಿವರಣೆಕಾರರು ಹೀಗೆ ಹೇಳುತ್ತಾರೆ: ಸ್ವಾಮಿ ವಿವೇಕಾನಂದರು ಈ ಸಮಯದಲ್ಲಿ ಭಗವಂತನ ಮಾರ್ಗದರ್ಶನದ ಬೆಳಕಿನಲ್ಲಿ ತಮ್ಮ ಕಾರ್ಯವನ್ನು ಮಾಡುತ್ತಿರಲಿಲ್ಲ. ಏಕೆಂದರೆ, ಆ ಕಾಲಘಟ್ಟದಲ್ಲಿ ಅವರು ಮಾಡುತ್ತಿದ್ದುದೆಲ್ಲವೂ ವ್ಯಾವಹಾರಿಕ ಕೆಲಸಗಳೇ ಆಗಿದ್ದವು. ಅವುಗಳನ್ನು ಅವರು ತಮ್ಮ ಇಚ್ಛಾಶಕ್ತಿ ಮತ್ತು ಸ್ವಭಾವಕ್ಕೆ ಅನುಸಾರವಾಗಿಯೇ ಮಾಡುತ್ತಿದ್ದರು. ಹೀಗಾಗಿ ಸ್ವಾಮಿ ವಿವೇಕಾನಂದರ ಜಾಗತಿಕ ಕಾರ್ಯದ ಮೊದಲ ಭಾಗದಲ್ಲಿ ಅವರು ಯಾವುದೇ ನಿರ್ಧಾರಕ್ಕೆ ಬರಲಾಗದೆ ತೊಳಲಾಡುತ್ತಿದ್ದರು. ಇದು ಕೂಡ ಸತ್ಯಕ್ಕೆ ದೂರವಾದ ವಿವರಣೆ.

ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಔನ್ನತ್ಯವನ್ನು ಅರ್ಥಮಾಡಿಕೊಳ್ಳದಿರುವುದೇ ಈ ಬಗೆಯ ಅಭಿಪ್ರಾಯಗಳಿಗೆ ಕಾರಣ. ಸ್ವಾಮೀಜಿ ಎಲ್ಲ ಸಮಯದಲ್ಲಿ ತಮ್ಮೆಲ್ಲ ಕಾರ್ಯಗಳಿಗೂ ದಿವ್ಯಾನುಭೂತಿಯಿಂದಲೇ ಮಾರ್ಗದರ್ಶನವನ್ನು ಪಡೆದುಕೊಳ್ಳುತ್ತಿದ್ದರು. ಇಷ್ಟು ಮಾತ್ರವಲ್ಲ, ಸ್ವಾಮಿ ಶಿವಾನಂದಜಿ ಅವರು ಹೇಳುವಂತೆ, ಸ್ವಾಮಿ ವಿವೇಕಾನಂದರು ಒಬ್ಬ ಈಶ್ವರ ಕೋಟಿ, ಅಂದರೆ ಭಗವತ್ಸಮಾನರು. ಅವರು ಮಾನವತೆಯು ದಿವ್ಯತೆಯ ಬಳಿಸಾರುವ ಆ ಅತೀಂದ್ರಿಯ ನೆಲೆಯಲ್ಲಿಯೇ ಜೀವಿಸುತ್ತಿದ್ದರು. ಹೀಗಾಗಿ ಅವರು ಕೈಗೊಳ್ಳುತ್ತಿದ್ದ ಪ್ರತಿಯೊಂದು ಕ್ರಿಯೆಯೂ ಭಗವಂತನ ಕಾರ್ಯವೇ ಆಗಿತ್ತು. ಅಷ್ಟೂ ಅಲ್ಲದೆ, ಅವರು ಜಗತ್ತಿನ ಗುರುವಾಗುವಂಥ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿಯೊಂದಿಗೇ ಜನ್ಮತಾಳಿದ್ದರು. ಸ್ವಾಮೀಜಿಯವರ ಜೀವನದ ಈ ಸಾರಭೂತ ಅಂಶವನ್ನು ನಾವು ಬೆಳಕಿಗೆ ತರುವುದು ಅತ್ಯಾವಶ್ಯಕ. ಹಾಗೆ ಮಾಡದಿದ್ದರೆ, ಅಮೆರಿಕ ದೇಶದಲ್ಲಿ ಅವರು ಮಾಡಿದ ಸುದೀರ್ಘ ಪ್ರವಚನಯಾತ್ರೆಯ ಮಹತ್ವವನ್ನು ನಾವು ಅರ್ಥಮಾಡಿಕೊಳ್ಳುವುದು ಮತ್ತು ಪ್ರಶಂಸಿಸುವುದು ಹೇಗೆ ತಾನೇ ಸಾಧ್ಯ?

ಒಬ್ಬ ದಾರ್ಶನಿಕ ಮಹಾನ್ ವ್ಯಕ್ತಿಯೊಬ್ಬನ ಗಭೀರ ಅಂತರಾಳವು ಸಹಜವಾಗಿಯೇ ಈ ಸಾಪೇಕ್ಷ ಜಗತ್ತನ್ನು ತನ್ನ ಚೈತನ್ಯದ ಬೆಳಕಿನಿಂದ ಬೆಳಗುತ್ತದೆ; ಅನುಗ್ರಹಿಸುತ್ತದೆ ಮತ್ತು ಉದ್ಬೋಧನಗೊಳಿಸುತ್ತದೆ. ಸ್ವಾಮೀಜಿಯವರು ಅಮೆರಿಕ ದೇಶಕ್ಕೆ ಮಾಡಿದ ಅತ್ಯುನ್ನತ ಸೇವೆಯೆಂದರೆ, ತಮ್ಮ ಅಂತರಾಳದ ಪರಿಪೂರ್ಣತೆ ಮತ್ತು ಆಧ್ಯಾತ್ಮಿಕಶಕ್ತಿ ಎಲ್ಲೆಲ್ಲೂ ಎಲ್ಲವನ್ನೂ ಬೆಳಗುವಂತೆ ಮಾಡಿರುವುದು. ಅಮೆರಿಕಾದ ಭಕ್ತರು ಸ್ವಾಮಿ ವಿವೇಕಾನಂದರನ್ನು ಕಾಣುವುದು ವೇದಾಂತ ತತ್ತ್ವಶಾಸ್ತ್ರದ ಒಬ್ಬ ಬೌದ್ಧಿಕ ಬೋಧಕನಂತಲ್ಲ , ಬದಲಾಗಿ, ಭಗವಂತನಿಂದಲೇ ಈ ದೇಶಕ್ಕೆ ಕಳುಹಿಸಲ್ಪಟ್ಟ ಪ್ರಪ್ರಥಮ ದೇವದೂತನೆಂದು. ಈ ನಿಟ್ಟಿನಲ್ಲಿ ಸ್ವಾಮೀಜಿಯವರೇ ಹೇಳುತ್ತಾರೆ, ನಾನು ಬರಿ ಪ್ರವಚನಗಳನ್ನು ಮಾಡಲಿಲ್ಲ, ಬದಲಾಗಿ ಅಮೆರಿಕಾದ ಜನಗಳಿಗೆ ಅಧ್ಯಾತ್ಮವನ್ನೇ ಪ್ರದಾನ ಮಾಡಿದೆ ಎಂದು. ಸ್ವಾಮಿ ವಿವೇಕಾನಂದರು ಸಂಪೂರ್ಣವಾಗಿ ಒಬ್ಬ ಭಗವತ್ಸಾಕ್ಷಾತ್ಕಾರ ಹೊಂದಿದ ದಿವ್ಯಪುರುಷರಾಗಿದ್ದಾರೆ. ಅವರ ಹೃದಯ ಸಮಸ್ತ ಮಾನವಕುಲದ ಸಂಕಷ್ಟಗಳಿಗೆ ಸಂತಪ್ತಗೊಳ್ಳುತ್ತಿತ್ತು. ಹೀಗಾಗಿ ಅವರು ಸಹಜವಾಗಿಯೇ ಸೂರ್ಯನು ಎಲ್ಲೆಡೆ ಬೆಳಕು ನೀಡುವಂತೆ, ಸಂಪೂರ್ಣ ಮಾನವ ಜನಾಂಗಕ್ಕೆ ತಮ್ಮ ಆಶೀರ್ವಾದವನ್ನು ನೀಡುತ್ತ ಹೋದರು. ಅವರು ನಡೆದುಕೊಂಡದ್ದರಲ್ಲಿ , ನುಡಿದುದರಲ್ಲಿ – ಎಲ್ಲದರಲ್ಲಿಯೂ ನಾವು ಕಾಣುವುದು ಅಗಾಧ ಆಧ್ಯಾತ್ಮಿಕ ಸುಸಂಪನ್ನತೆಯ ಗಭೀರ ಮೌನವನ್ನು ಮತ್ತು ಶಾಂತಿಯನ್ನು; ಸಕಲ ಮಾನವ ಜನಾಂಗದ ಮೇಲೆ ಅವರಿಗಿದ್ದ ಅಸದಳ ಅನುಕಂಪವನ್ನು ಹಾಗೂ ಇತರರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಉದ್ದೀಪನಗೊಳಿಸುವ ಅವರ ಮಹಾನ್ ಸಾಮರ್ಥ್ಯದ ಸರ್ವವ್ಯಾಪಕ ಅನಾವರಣವನ್ನು. ಇವುಗಳಷ್ಟೇ ಅಮೆರಿಕಾದ ಜನರ ಹೃದಯವನ್ನು ಸೂರೆಗೊಂಡಿರುವುದು

ಹೊರತು, ಅವರ ದೇಶಭಕ್ತಿ ಅಥವಾ ಬೌದ್ಧಿಕ ಪ್ರೌಢಿಮೆ ಮಾತ್ರ ವಲ್ಲ.

ಸ್ವಾಮಿ ವಿವೇಕಾನಂದರು ಎಲ್ಲಿಗೇ ಹೋಗಲಿ, ಅವರ ಬಾಹ್ಯ ಚಟುವಟಿಕೆಗಳು ಏನೇ ಇರಲಿ, ಯಾವತ್ತೂ ಅವರ ಮೊಟ್ಟ ಮೊದಲ ಉದ್ದೇಶ ಅರ್ಹರಾದವರಿಗೆ ಆಧ್ಯಾತ್ಮಿಕತೆಯನ್ನು ಪ್ರದಾನ ಮಾಡುವುದೇ ಆಗಿತ್ತು. ಅದು ಅವರ ಸ್ವಭಾವದಲ್ಲಿಯೇ ಇತ್ತು. ಅವರು ಭಾರತದ ಕಟ್ಟುಪಾಡುಗಳ ಬಗೆಗಿನ ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ಹಿಂದೂಧರ್ಮದ ಬಗ್ಗೆ ಕೇಳುಗರ ಪ್ರಶ್ನೆಗೆ ಉತ್ತರ ವನ್ನು ಕೊಡುವಾಗ, ಸಾಂಪ್ರದಾಯವಾದಿಗಳು ಮತ್ತು ಸಂಕು ಚಿತವಾದಿಗಳನ್ನು ಖಂಡಿಸುವಾಗ, ಸಾರ್ವಜನಿಕ ಸಮಾರಂಭ ಗಳಲ್ಲಿ ಭಾಗವಹಿಸುವಾಗ, ರೈಲುಬಂಡಿಗಳಲ್ಲಿ ಅಥವಾ ಹೊಟೆಲು ಗಳಲ್ಲಿ ಜನರ ಪರಿಚಯವನ್ನು ಮಾಡಿಕೊಳ್ಳುತ್ತಿರುವಾಗ – ಹೀಗೆ ಎಲ್ಲ ಪ್ರಸಂಗದಲ್ಲಿಯೂ ಅವರು ಜನರೆಡೆಗೆ ದಿವ್ಯತೆಯ ಬೆಳ ಕನ್ನು ಚೆಲ್ಲುತ್ತಿದ್ದರು. ಅಕ್ಷರಶಃ ಸ್ವಾಮಿ ವಿವೇಕಾನಂದರು ದಿವ್ಯ ಭಾವನೆಯ ಬೀಜಗಳನ್ನು ಎಣೆಯಿಲ್ಲದಷ್ಟು ಜನರ ಹೃದಯಾಂತ ರಾಳಗಳಲ್ಲಿ ಬಿತ್ತಿದರು. ಅದು ಅವರೆಲ್ಲರ ಜೀವನವನ್ನು ಎಲ್ಲ ಕಾಲಕ್ಕೂ ಆನಂದಮಯವಾಗಿ ಪರಿವರ್ತಿಸಿಬಿಟ್ಟಿತು. ಈ ಅದ್ಭುತ ಆಧ್ಯಾತ್ಮಿಕ ಪರಿವರ್ತನೆಯನ್ನು ಅವರು ಎಷ್ಟು ಸಹಜವಾಗಿ, ತಾನೇತಾನಾಗಿ ಮಾಡುತ್ತಿದ್ದರೆಂದರೆ, ಕೆಲವೊಮ್ಮೆ ಅವರಿಗೇ ಅದು ಅರಿವಾಗುತ್ತಿರಲಿಲ್ಲ. ಇಂಥ 'ಅಪ್ರಜ್ಞೆಯ' ಸ್ಥಿತಿಯು ಎಲ್ಲ ಪ್ರವಾದಿಗಳಲ್ಲಿ ಮತ್ತು ವಿಮೋಚಕರಲ್ಲಿ ಸರ್ವೇಸಾಧಾರಣವಾಗಿ ಕಾಣಬರುವುದನ್ನು ನಾವು ಕಾಣುತ್ತೇವೆ. ಸೂರ್ಯನಿಗೆ ತಾನು ಜಗತ್ತೆಲ್ಲವನ್ನೂ ಬೆಳಗುತ್ತಿದ್ದೇನೆ ಎಂಬ ಅರಿವೇ ಇರುವುದಿಲ್ಲ, ಅಲ್ಲವೆ? ಏಕೆಂದರೆ, ಅದು ಅವನ ಸ್ವಭಾವವೇ ಆಗಿದೆ. ಹೀಗಿ ದ್ದಾಗ್ಯೂ, ಸ್ವಾಮಿ ವಿವೇಕಾನಂದರಿಗೆ ತಮ್ಮ ಅನುಪಮ ಆಧ್ಯಾತ್ಮಿಕ ಬಲದ ಪ್ರಜ್ಞೆ ಇದ್ದೇ ಇತ್ತು. ಅವರು ಮಾರ್ಚ್, ೧೮೯೪ರಲ್ಲಿ ಹೀಗೆ ಪತ್ರ ಬರೆಯುತ್ತಾರೆ: ''ಈ ಸಾಧನದಿಂದ (ಅಂದರೆ ತಮ್ಮ ಮೂಲಕ), ಭಗವಂತನೇ ಈ ದೂರದೇಶದಲ್ಲಿ (ಅಮೆರಿಕಾದಲ್ಲಿ) ಸಾವಿರಾರು ಜನರ ಹೃದಯಗಳಲ್ಲಿ ಆಧ್ಯಾತ್ಮಿಕ ಚೈತನ್ಯವನ್ನು ಉದ್ದೀಪನಗೊಳಿಸುತ್ತಿದ್ದಾನೆ.''

ಈ ಕಾಲದಲ್ಲಿಯೇ ಸ್ವಾಮೀಜಿ ಹಲವಾರು ಜನಗಳ ಸಂಪರ್ಕ ವನ್ನು ಪಡೆದುಕೊಂಡರು. ಮಹಾನ್ ವ್ಯಕ್ತಿಯೊಬ್ಬನ ಮುಖ ದಿಂದ ಹೊರಹೊಮ್ಮಿದ ಪ್ರತಿಯೊಂದು ಮಾತು ಕೂಡ ಕೇಳುಗನ ಜೀವನದಲ್ಲಿ ಚಿರಸ್ಥಾಯಿಯಾದ ಫಲವನ್ನು ಬೀರುತ್ತದೆ ಎನ್ನು ವುದು ಹಿಂದೂಗಳ ನಂಬಿಕೆ. ಇದು ನಿಜವಾದರೆ, ಸ್ವಾಮಿ ವಿವೇ ಕಾನಂದರ ಅಮೆರಿಕಾ ಪ್ರವಾಸವು ಆ ದೇಶದ ಜನಜೀವನದ ಮೇಲೆ ಬೀರಿದ ಪ್ರಭಾವವನ್ನು ನಾವು ಅಳೆಯಲು ಪ್ರಾರಂಭಿ ಸುವ ಕಾಲ ಇನ್ನೂ ಬಂದಿಲ್ಲವೆಂದೇ ಹೇಳಬೇಕು. ಸ್ವಾಮಿ ವಿವೇ ಕಾನಂದರು ಈ ಕಾಲಘಟ್ಟದಲ್ಲಿ ಅಮೆರಿಕಾದ ಅನೇಕ ಪ್ರಾಂತ ಗಳಿಗೆ ಭೇಟಿಕೊಟ್ಟರು. ಅಲ್ಲಿನ ಅದೆಷ್ಟು ನೂರಾರು ಸಂಖ್ಯೆಯ ಜನರು ಅವರಿಂದ ಆಶೀರ್ವಾದಗಳನ್ನು ಸ್ವೀಕರಿಸಿದರು ಎನ್ನು ವುದು ನಮಗೆ ತಿಳಿಯದು. ಅಂಥ ದೈವಾನುಗ್ರಹವನ್ನು ಪಡೆದು ಕೊಂಡ ಆ ಪುಣ್ಯವಂತರಿಗೇ ಅದರ ಮಹತ್ವದ ಅರಿವು ಆಗ ದಿರಬಹುದು. ಏಕೆಂದರೆ ದೈವಾಶೀರ್ವಾದವೆಂಬುದು ರಹಸ್ಯ ವಾದ ಬಗೆಯಲ್ಲಿ ಹಲವು ಅಜ್ಞಾತ ಬಗೆಗಳಲ್ಲಿ ಕಾರ್ಯವೆಸಗು ವುದು. ಹೀಗಾಗಿ, ಸ್ವಾಮೀಜಿಯವರು ಅಮೆರಿಕಾಗೆ ಹೋದ ಮೊದಮೊದಲು ಅವರ ಉದ್ದೇಶ ತಮ್ಮ ಭಾರತೀಯ ಕಾರ್ಯಕ್ಕೆ ಹಣಸಂಗ್ರಹಣೆ ಮಾಡುವುದಾಗಿದ್ದರೂ, ತಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ಅಮೆರಿಕಾದ ಜನತೆಗೆ ನಿಜವಾದ ಅರಿ ವನ್ನು ಮೂಡಿಸುವುದಾಗಿದ್ದರೂ, ಇದಲ್ಲದೆ, ಭಾರತದ ಬಗ್ಗೆ ಸುಳ್ಳು ಅಪಪ್ರಚಾರಗಳನ್ನು ಎದುರಿಸಿ ಮೆಟ್ಟಿನಿಲ್ಲುವುದಾಗಿದ್ದರೂ – ಈ ಪ್ರವಾಸದ ಮೂಲ ಉದ್ದೇಶವು ಪಾಶ್ಚಿಮಾತ್ಯ ದೇಶದ ಜನಗಳನ್ನು ಲಕ್ಷ್ಯವಾಗಿ ಇಟ್ಟುಕೊಂಡ ಪ್ರವಾದಿಯೊಬ್ಬನ ದಿವ್ಯ ಕಾರ್ಯವಾಗಿತ್ತು. ಅದೇನೆಂದರೆ ಸಾಧ್ಯವಾದ ಮಟ್ಟಿಗೆ ಹೆಚ್ಚು ಹೆಚ್ಚು ಜನರೊಂದಿಗೆ ಬೆರೆಯುವುದು ಮತ್ತು ಅವರಿಗೆಲ್ಲ ತನ್ನ ದಿವ್ಯ ಆಶೀರ್ವಾದವನ್ನು ದಯಪಾಲಿಸುವುದು. ಅಮೆರಿಕಾದ ಲ್ಲಿರುವ ನಾವು ಪಾಶ್ಚಾತ್ಯದೇಶಗಳಿಗೆ ಸ್ವಾಮೀಜಿ ನೀಡಿದ ಭೇಟಿಯ ಸಾರಸರ್ವಸ್ವ ಮತ್ತು ಅಂತಃಶಕ್ತಿಗಳು ಇವೇ ಆಗಿವೆ ಎಂದೂ, ಹಾಗೆಯೇ ಸ್ವಾಮಿ ವಿವೇಕಾನಂದರ ದಿವ್ಯಸ್ಪರ್ಶದಿಂದ ಈ ಭೂಮಿ ಪುನೀತವಾಯಿತು ಎಂದೂ ದೃಢವಾಗಿ ನಂಬು ತ್ತೇವೆ.

ಸ್ವಾಮಿ ವಿವೇಕಾನಂದರ ಜೀವನ ಮತ್ತು ಉಪದೇಶಗಳ ವಿವರಣೆಕಾರರಲ್ಲೆಲ್ಲ, ಸ್ವಾಮಿ ಅಭೇದಾನಂದರು ಸ್ವಾಮೀಜಿ ಯವರ ಅಮೆರಿಕಾ ಕಾರ್ಯದ ವಿಶ್ಲೇಷಣೆಯನ್ನು ವಾಸ್ತವಕ್ಕೆ ಹೆಚ್ಚು ನಿಕಟವಾಗಿ ಮಾಡಿದ್ದಾರೆ ಎನ್ನಬಹುದು. ನ್ಯೂಯಾರ್ಕ್ ವೇದಾಂತ ಸೊಸೈಟಿಯಲ್ಲಿ ಅವರು ಮಾರ್ಚ್ ೮, ೧೯೦೭ ರಂದು ತಾವು ಮಾಡಿದ ಭಾಷಣದಲ್ಲಿ ಹೀಗೆ ಹೇಳುತ್ತಾರೆ: ''ಸತ್ಯದ ಪ್ರತಿ ಪಾದಕರು ಕೆಲವೇ ಕೆಲವು ಜನ. ಆದರೆ ಅಂಥ ವರ ದಿವ್ಯಶಕ್ತಿಗಳ ಅನುಭವ ಅವರ ದಿವ್ಯ ವ್ಯಕ್ತಿತ್ವದ ಪರಿಸರ ದಲ್ಲಿ ಬಂದವರಿಗೆಲ್ಲ ಖಂಡಿತವಾಗಿಯೂ ಆಗುತ್ತದೆ. ಅಂಥ ಸತ್ಯಪ್ರತಿಪಾದಕನು ಒಂದು ಭಾರಿ ಧೂಮಕೇತುವಿನಂತೆ ಆಗಸ ದಲ್ಲಿ ಮೂಡಿಬರುತ್ತಾನೆ. ಸಾಮಾನ್ಯಜನರ ಕಣ್ಣುಕುಕ್ಕು ವಂತೆ ಇರುವ ಅವನ ವ್ಯಕ್ತಿತ್ವದ ಪ್ರಭಾವವು ಅವರೆಲ್ಲರ ಹೃದಯ ಗಳನ್ನು ಆಶ್ಚರ್ಯ ಮತ್ತು ಪ್ರಶಂಸೆಗಳಿಂದ ಪುಲಕಿತವಾಗು ವಂತೆ ಮಾಡುತ್ತದೆ. ದಿವಂಗತ ಸ್ವಾಮಿ ವಿವೇಕಾನಂದರು ಅಂಥ ಪ್ರಜ್ವಲಿಸುವ ಗಗನತಾರೆಯಾಗಿದ್ದಾರೆ. ಅಂಥವರು ಆಧ್ಯಾತ್ಮಿಕ ಕ್ಷಿತಜದಲ್ಲಿ ಕಾಣಿಸಿಕೊಳ್ಳುವುದು ಹಲವಾರು ಶತಮಾನಗಳ ನಂತರ ಒಮ್ಮೆ ಮಾತ್ರ.

*(ಇಲ್ಲಿಗೆ 'Swami Vivekananda in the West - New Discoveries' ಗ್ರಂಥದ ಮೊದಲ ಭಾಗದ ಸಂಗ್ರಹಾನುವಾದವು ಮುಗಿಯಿತು)*